## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:- ಶ್ರೀ ಹೆಚ್.ಡಿ.ಮಹಾಲಿಂಗಯ್ಯ.ಕಾರ್ಯನಿರ್ವಾಹಕ ಅಧಿಕಾರಿ. ತಾಲ್ಲೂಕು ಪಂಚಾಯತಿ. ಮಧುಗಿರಿ. ತುಮಕೂರು ಜಿಲ್ಲೆ. ಮತ್ತು ಶ್ರೀ ತಿಪ್ಪೇಸ್ವಾಮಿ. ಸಹಾಯಕ ಲೆಕ್ಕಾಧಿಕಾರಿ. ತಾಲ್ಲೂಕು ಪಂಚಾಯತಿ. ಮಧುಗಿರಿ. ತುಮಕೂರು ಜಿಲ್ಲೆ ಹಾಗೂ ಶ್ರೀಮತಿ ಮಹಾಲಕ್ಷ್ಮೀ. ವಿಷಯ ನಿರ್ವಾಹಕರು. ತಾಲ್ಲೂಕು ಪಂಚಾಯತಿ. ಮಧುಗಿರಿ. ತುಮಕೂರು ಜಿಲ್ಲೆ. ಇವರ ವಿರುದ್ಧದ ಶಿಸ್ತು ಕ್ರಮ – ಅಂತಿಮ ಆದೇಶ.

ಓದಲಾಗಿದೆ:-1. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 82 ವಿಸೇಬಿ 2015. ದಿನಾಂಕ:02-05-2015.

2. ಆಪಾದಿತರುಗಳ ದಿನಾಂಕ: 16-07-2015. 26-05-2015 ಮತ್ತು 1-6-2015 ರ ಲಿಖಿತ ಹೇಳಿಕೆಗಳು.

ಪ್ರಸ್ತಾವನೆ:

ಕೇಂದ್ರ ಪುರಸ್ಕೃತ ಯೋಜನೆಯಾದ ಜೀತ ವಿಮುಕ್ತರ ಪುನರ್ ವಸತಿ ಕಾರ್ಯಕ್ರಮದಡಿ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿಗೆ 2012-13ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದ ಬಳಕೆಯಲ್ಲಿ ಲೋಪಗಳಾಗಿರುವ ಬಗ್ಗೆ ದೂರು ಸ್ವೀಕೃತವಾದ ಹಿನ್ನಲೆಯಲ್ಲಿ ಈ ಬಗ್ಗೆ ಹಿರಿಯ ಉಪ ನಿರ್ದೇಶಕರು, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಮತ್ತು ಉಪ ನಿರ್ದೇಶಕರು, ಸ್ವ ಉದ್ಯೋಗ ಕಾರ್ಯಕ್ರಮ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಂದ ನಡೆಸಲಾಗಿದ್ದು, ಪರಿಶೀಲನಾ ಸಂದರ್ಭದಲ್ಲಿ ಗಂಭೀರ ಸ್ವರೂಪದ ಲೋಪಗಳಾಗಿರುವುದು ಕಂಡು ಬಂದ ಹಿನ್ನಲೆಯಲ್ಲಿ ಸರ್ಕಾರವು ಸದರಿ ಲೋಪಗಳಿಗೆ ಕಾರಣರಾದ ಈ ಕೆಳಕಂಡ ಅಧಿಕಾರಿ/ನೌಕರರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 12(1) (ಎ) ರಡಿಯಲ್ಲಿ ಶಿಸ್ತು ಕ್ರಮ ಜರುಗಿಸಲು ತೀರ್ಮಾನಿಸಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ:02-05-2015ರ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು:-

1) ಶ್ರೀ ಹೆಚ್.ಡಿ.ಮಹಾಲಿಂಗಯ್ಯ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಧುಗಿರಿ, ತುಮಕೂರು ಜಿಲ್ಲೆ.
2) ಶ್ರೀ ತಿಪ್ಪೇಸ್ವಾಮಿ, ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕು ಪಂಚಾಯತಿ, ಮಧುಗಿರಿ, ತುಮಕೂರು ಜಿಲ್ಲೆ.
3) ಶ್ರೀಮತಿ ಮಹಾಲಕ್ಷ್ಮೀ, ವಿಷಯ ನಿರ್ವಾಹಕರು, ತಾಲ್ಲೂಕು ಪಂಚಾಯತಿ, ಮಧುಗಿರಿ, ತುಮಕೂರು ಜಿಲ್ಲೆ.

ಪ್ರತಿಯಾಗಿ ಸದರಿ ಆಪಾದಿತರುಗಳು ಸರ್ಕಾರಕ್ಕೆ ತಮ್ಮ ಲಿಖಿತ ಹೇಳಿಕೆಯನ್ನು ಮೇಲೆ ಕ್ರಮ ಸಂಖ್ಯೆ 2 ರಲ್ಲಿ ಓದಲಾದಂತೆ ಸಲ್ಲಿಸಿರುತ್ತಾರೆ. ಆಪಾದಿತರುಗಳು ಸಲ್ಲಿಸಿರುವ ಲಿಖಿತ ಹೇಳಿಕೆ, ಪರಿಶೀಲನಾ ತಂಡವು ಸಲ್ಲಿಸಿರುವ ವರದಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ್ದು, ಮೇಲೆ ತಿಳಿಸಿರುವ ಆಪಾದಿತರ ವಿರುದ್ಧ ಮಾಡಲಾಗಿರುವ ಆರೋಪಗಳು ಒಂದೇ ರೀತಿಯದ್ದಾಗಿದ್ದು, ಅವುಗಳ ವಿವರಗಳು ಈ ಕೆಳಕಂಡಂತಿರುತ್ತವೆ:-

1) ಕೇಂದ್ರ ಪುರಸ್ಕೃತ ಜೀತ ವಿಮುಕ್ತರ ಪುನರ್ ವಸತಿ ಕಾರ್ಯಕ್ರಮದಡಿ 2012-13 ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದ ಈ ಯೋಜನೆಯು ಗ್ರಾಮ ಪಂಚಾಯತಿ ಕಾರ್ಯಕ್ರಮವಾಗಿದ್ದು, ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಬೇಕಾಗಿತ್ತು. ಆದರೆ, ಇವರು ಗ್ರಾಮ ಪಂಚಾಯತಿಗಳಿಗೆ ಸದರಿ ಯೋಜನೆಯ ಅನುದಾನವನ್ನು ಬಿಡುಗಡೆ ಮಾಡದೆ ಕರ್ತವ್ಯಲೋಪವೆಸಗಿರುತ್ತಾರೆ.

2) ಸರ್ಕಾರದ ಆದೇಶ ಸಂ:ಗ್ರಾಅಪ 15 ಆರ್‌ಬಿಎಲ್ 2012 ದಿನಾಂಕ:31-03-2013 ರಲ್ಲಿ ಗ್ರಾಮ ಪಂಚಾಯತಿಗಳಿಂದು ಸೂಚಿಸಲಾಗಿದ್ದರೂ, ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡದೆ ಮಧುಗಿರಿ ತಾಲ್ಲೂಕು ಪಂಚಾಯತಿ ಕಛೇರಿಯಲ್ಲಿ ವಿತರಣೆ ಮಾಡಿ, ನಿಯಮಬಾಹಿರವಾಗಿ ಕರ್ತವ್ಯಲೋಪವೆಸಗಿರುತ್ತಾರೆ.

3) ಅನುದಾನ ಬಿಡುಗಡೆಯಾಗಿ 1 ರಿಂದ 2 ವರ್ಷ ಕಳೆದರೂ ಇನ್ನೂ 55 ಫಲಾನುಭವಿಗಳಿಗೆ ಅನುದಾನ ವಿತರಣೆ ಮಾಡದೆ ವಿಫಲರಾಗಿ ಕರ್ತವ್ಯಲೋಪವೆಸಗಿರುತ್ತಾರೆ.

4) ಚೆಕ್ ವಿತರಣಾ ವಹಿಯಲ್ಲಿ ಸುಮಾರು 75 ಜನರಿಂದ ರಜಿಸ್ಟರ್‌ನಲ್ಲಿ ಫಲಾನುಭವಿಗಳ ಸಹಿ ಪಡೆಯದೇ ಕರ್ತವ್ಯಲೋಪವೆಸಗಿರುತ್ತಾರೆ.

5) ಚೆಕ್‌ಗಳು ಜೀತ ವಿಮುಕ್ತರ ಹೆಸರಿನಲ್ಲಿ ವಿತರಣೆಯಾಗಿದ್ದರೂ ಚೆಕ್ ಸಂಖ್ಯೆ, ಮೊತ್ತವು ಸುವರ್ಣ ಸೌಹಾರ್ದ ಪತ್ತಿನ ಸಹಕಾರ ಸಂಘ, ತುಮಕೂರಿನ ಖಾತೆದಾರರಾದ ಶ್ರೀ ಗೋವಿಂದರಾಜು, ಬಿನ್ ಶಂಕರಪ್ಪ, ಶ್ರೀ ಜಗನ್ನಾಥ್ ಗುಪ್ತ, ಬಿನ್ ಲೇಟ್ ಸುಬ್ಬಯ್ಯ ಶೆಟ್ಟಿ ಇವರ ಹೆಸರುಗಳಿಗೆ ಜಮಾ ಮಾಡಿ ಕರ್ತವ್ಯಲೋಪವೆಸಗಿರುತ್ತಾರೆ.

ಸದರಿ ನೋಟೀಸಿಗೆ **ಶ್ರೀ ಹೆಚ್.ಡಿ.ಮಹಾಲಿಂಗಯ್ಯ**, ಇವರು ಈ ಕೆಳಕಂಡಂತೆ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ:-

1. ಬಿಡುಗಡೆಯಾದ ಅನುದಾನವನ್ನು ಸ್ವೀಕರ್ತನ ರಸೀದಿ (ಸಿ.ಟಿ.ಎಸ್.8) ಮೂಲಕ ಮುಖ್ಯ ಲೆಕ್ಕಾಧಿಕಾರಿಗಳ ಮೇಲು ಸಹಿ ಪಡೆದು ಲಗತ್ತಿಸಿದ ಅನುಬಂಧದಂತೆ ಕಾರ್ಯನಿರ್ವಾಹಕ ಅಧಿಕಾರಿರವರ ಹೆಸರಿನಲ್ಲಿ ಖಜಾನೆಯಿಂದ ಚೆಕ್ ಪಡೆದು ಸಕ್ಷಮ ಪ್ರಾಧಿಕಾರದ ಅನುಮತಿ ಮತ್ತು ಸೂಚನೆಯಂತೆ ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿರಿಸಿ ಶೀಘ್ರವೇ ಅರ್ಹ ಜೀತ ವಿಮುಕ್ತ ಫಲಾನುಭವಿಗಳಿಗೆ ಈ ಸೌಲಭ್ಯಗಳನ್ನು ಒದಗಿಸ ಬೇಕೆಂಬ ಸಕ್ಷಮ ಪ್ರಾಧಿಕಾರದ ಸೂಚನೆ ಮತ್ತು ಸ್ಥಳೀಯ ಶಾಸಕರು ಚರ್ಚಿಸಿ ತೀರ್ಮಾನಿಸಲಾದಂತೆ ಜೀತ ವಿಮುಕ್ತ ಪುನರ್ವಸತಿ ಸೌಲಭ್ಯಗಳ ವಿತರಣಾ ಸಮಾರಂಭವನ್ನು ಏರ್ಪಡಿಸಿ ವಿತರಿಸಲಾಗಿರುತ್ತದೆ. ಈ ಕ್ರಮವನ್ನು ಜೀತ ವಿಮುಕ್ತರಿಗೆ ಯಾವುದೇ ವಿಳಂಬವಾಗದೇ ಕೂಡಲೇ ಅವರುಗಳಿಗೆ ಸೌಲಭ್ಯವನ್ನು ತಲುಪಿಸುವ ಏಕೈಕ ಸದುದ್ದೇಶ ಮತ್ತು ಸದ್ಭಾವನೆಯಿಂದ ಕ್ರಮವಹಿಸಲಾಗಿರುತ್ತದೆ. 15 ದಿನಗಳೊಳಗೆ ಅನುದಾನವನ್ನು ಫಲಾನುಭವಿಗಳಿಗೆ ತಲುಪಿಸಬೇಕೆಂಬ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಜಿಲ್ಲಾ ಪಂಚಾಯತ್ ತುಮಕೂರು ಇವರ ಆದೇಶಾನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ. ಸದರಿ ಪ್ರಕ್ರಿಯೆಯಲ್ಲಿ ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲ. ಆದ್ದರಿಂದ ತಮ್ಮ ವಿರುದ್ಧದ ಆರೋಪವನ್ನು ಕೈಬಿಡಲು ಕೋರಿರುತ್ತಾರೆ.
2. ಜೀತ ವಿಮುಕ್ತ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು ಬಿಡುಗಡೆಯಾದ ಅನುದಾನ ಸದ್ಬಳಕೆಯ ಹಿತದೃಷ್ಟಿಯಿಂದ ದಿನಾಂಕ: 4.05.2013 ರಂದು ಮಧುಗಿರಿ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿ ಗಳ ತುರ್ತು ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಕೂಡಲೇ ಸದರಿ ಕಾರ್ಯಕ್ರಮ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಗಿರುತ್ತದೆ. ಶಾಸಕರು ಮಧುಗಿರಿ ವಿಧಾನ ಸಭಾ ಕ್ಷೇತ್ರ ಇವರ ಪತ್ರ ದಿನಾಂಕ:02.05.2013 ರಂತೆ ಕ್ರಮವಹಿಸಿ ದಿನಾಂಕ: 22.05.2013 ರಂದು ಮಧುಗಿರಿ ಪಟ್ಟಣದ ಮಾಲಿ ಮರಿಯಪ್ಪ ರಂಗ ಮಂದಿರದಲ್ಲಿ ಮಧುಗಿರಿ ಕ್ಷೇತ್ರದ ಸನ್ಮಾನ್ಯ ಶಾಸಕರು ಹಾಗೂ ಮಾನ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಸಮಕ್ಷಮದಲ್ಲಿ ಜೀತ ವಿಮುಕ್ತರ ಪುನರ್ವಸತಿ ಸಹಾಯಧನ ಯೋಜನೆಯಡಿ ಮಾಶಾಸನ ಚೆಕ್ ವಿತರಣಾ ಸಮಾರಂಭವನ್ನು ಏರ್ಪಡಿಸಿದ್ದು, ಜೀತ ವಿಮುಕ್ತ ಫಲಾನುಭವಿಗಳಿಗೆ ನೇರವಾಗಿ ಕೆಲವೊಂದು ಚೆಕ್‌ಗಳನ್ನು ವಿತರಿಸಲಾಗಿರುತ್ತದೆ. ಚೆಕ್ ವಿತರಣಾ

3:./-

ಸಮಾರಂಭವನ್ನು ಮಾನ್ಯ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಹಾಗೂ ಸಕ್ಷಮ ಪ್ರಾಧಿಕಾರ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಉಪಸ್ಥಿತಿಯಲ್ಲಿ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಜನ ಪ್ರತಿನಿಧಿಗಳ ಸಂಘ ಸಂಸ್ಥೆಗಳ ಪ್ರಾತಿನಿಧಿತ್ವದಲ್ಲಿ ಅರ್ಹ ಫಲಾನುಭವಿಗಳಿಗೆ ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಪಿ.ಡಿ.ಓ./ಕಾರ್ಯದರ್ಶಿ, ಚೆಕ್ ವಿತರಿಸುವಲ್ಲಿ ಪಾಲ್ಗೊಂಡು ಕ್ರಮವಹಿಸಬೇಕೆಂದು ತಿಳಿಸಿದ್ದು, ಅದರಂತೆ ಗ್ರಾಮ ಪಂಚಾಯತಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಇದರಲ್ಲಿ ಪ್ರಾಮಾಣಿಕವಾಗಿ ಭಾಗವಹಿಸಿ ಅವರ ಮತ್ತು ಸಭೆಯಲ್ಲಿ ಹಾಜರಿದ್ದ ಗಣ್ಯರ ಸಮಕ್ಷಮದಲ್ಲಿ ವಿತರಿಸಲಾಗಿದೆ. ಸದರಿ ಪ್ರಕ್ರಿಯೆಯಲ್ಲಿ ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲ. ಆದ್ದರಿಂದ ತಮ್ಮ ವಿರುದ್ಧದ ಆರೋಪವನ್ನು ಕೈಬಿಡಲು ಕೋರಿರುತ್ತಾರೆ.

3.ಜೀತ ವಿಮುಕ್ತರ ಮಾಶಾಸನ ಸೌಲಭ್ಯದಡಿ ಗುರುತಿಸಲ್ಪಟ್ಟ 843 ಫಲಾನುಭವಿಗಳಿಗೆ ಸಂಪೂರ್ಣ ವಾಗಿ ಚೆಕ್‌ಗಳನ್ನು ವಿತರಿಸಲಾಗಿರುತ್ತದೆ. ಜೀತ ವಿಮುಕ್ತರ ಪುನರ್ವಸತಿ ಸೌಲಭ್ಯ ಕಾರ್ಯಕ್ರಮದಡಿ ಒಟ್ಟು 726 ಜೀತ ವಿಮುಕ್ತ ಫಲಾನುಭವಿಗಳಲ್ಲಿ ಸುಮಾರು 668 ಫಲಾನುಭವಿಗಳ ಚೆಕ್ಕುಗಳು ವಿತರಣೆಯಾಗಿರುತ್ತದೆ. ಉಳಿದ ಫಲಾನುಭವಿಗಳಿಗೂ ಈ ಸೌಲಭ್ಯವನ್ನು ನೀಡಲು ಅಗತ್ಯವಾದಂತ ದಾಖಲೆಗಳಾದ ಗುರುತಿನ ಪತ್ರ, ಪಾವತಿಯಾದವರ ವಾರಸುದಾರಿಗೆ ಪತ್ರ, ಮರಣ ಪ್ರಮಾಣ ಪತ್ರ, ವಾಸಸ್ಥಳ ದೃಢೀಕರಣ ಪತ್ರವನ್ನು ಮುಂತಾದ ಅಗತ್ಯ ದಾಖಲೆಗಳನ್ನು ಒದಗಿಸಿರುವುದಿಲ್ಲ. ಇವುಗಳನ್ನು ಒದಗಿಸುವುದರಲ್ಲಿ ಆ ಫಲಾನುಭವಿಗಳು ವಿಫಲವಾಗಿರುತ್ತಾರೆ. ಇದರಲ್ಲಿ ಕೆಲವರು ಮರಣಿಸಿದ್ದು, ಹಾಗು ಸ್ವಗ್ರಾಮದಲ್ಲಿ ವಾಸವಿಲ್ಲದೇ ಸಂಬಂಧಿಕರು ಮತ್ತು ಜೀವನೋಪಾಯಕ್ಕಾಗಿ ಬೇರೆ ಬೇರೆ ಊರಿನಲ್ಲಿ ವಾಸವಾಗಿರುವುದರಿಂದ ಇವರುಗಳಿಗೆ ಈ ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ. ಆದರೂ ಈ ಬಗ್ಗೆ ವಿಳಂಬ ಮಾಡದೇ ಈ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಒದಗಿಸುವಲ್ಲಿ ಗ್ರಾಮ ಪಂಚಾಯತಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಶೀಘ್ರದಲ್ಲಿ ಇವರುಗಳಿಗೂ ಸೌಲಭ್ಯವನ್ನು ಅನುಷ್ಠಾನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಸದರಿ ಪ್ರಕ್ರಿಯೆಯಲ್ಲಿ ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲ. ಆದ್ದರಿಂದ ತಮ್ಮ ವಿರುದ್ಧದ ಆರೋಪವನ್ನು ಕೈಬಿಡಲು ಕೋರಿರುತ್ತಾರೆ.

4.ಸಾರ್ವಜನಿಕವಾಗಿ ಚೆಕ್ ವಿತರಣಾ ಸಮಾರಂಭದಲ್ಲಿ ಜನಸಂದಣಿ ಹೆಚ್ಚಾಗಿದ್ದು, ಚೆಕ್ ಪಡೆಯಲಾದ ಬಹುತೇಕ ಫಲಾನುಭವಿಗಳು ಚೆಕ್ ವಿತರಣಾ ವಹಿಯಲ್ಲಿ ಸಹಿ ಮಾಡಿರುತ್ತಾರೆ. ಆದರೆ ಕೆಲವೊಂದು ಫಲಾನುಭವಿಗಳು ಚೆಕ್ಕುಗಳನ್ನು ಸ್ವೀಕರಿಸಿದ್ದು, ವಹಿಯಲ್ಲಿ ಸಹಿ ಪಡೆಯಲು ಸಾಧ್ಯವಾಗಿರುವುದಿಲ್ಲ. ಆದರೆ ಚೆಕ್ಕುಗಳು ಮಾತ್ರ ಸದರಿ ಫಲಾನುಭವಿಗಳಿಗೆ ತಲುಪಿದ್ದು, ಸಮಾರಂಭವಾದ್ದರಿಂದ ಸಹಿಯನ್ನು ಪಡೆಯಲು ಕಷ್ಟಕರವಾಗಿರುತ್ತದೆ.ಇದರಲ್ಲಿ ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲ. ಆದ್ದರಿಂದ ತಮ್ಮ ವಿರುದ್ಧದ ಆರೋಪವನ್ನು ಕೈಬಿಡಲು ಕೋರಿರುತ್ತಾರೆ.

5. ಈ ಕಛೇರಿಯಿಂದ ಜೀತ ವಿಮುಕ್ತ ಫಲಾನುಭವಿಗಳಿಗೆ ಖಾತಾ ಸಂದಾಯ ಚೆಕ್ಕುಗಳನ್ನು ನೀಡಲಾಗಿರುತ್ತದೆ. ವಿನ: ಯಾವುದೇ (Account Payee) ರೀತಿಯಲ್ಲೂ ತೆರದ ಚೆಕ್ (Open Cheque)/ ಸ್ವಂತಕ್ಕೆ (Self Cheque) ಮುಖಾಂತರ ಸಂದಾಯ ಮಾಡಿರುವುದಿಲ್ಲ. ಅರ್ಹ ಫಲಾನುಭವಿಗಳ ವೈಯಕ್ತಿಕ ಬ್ಯಾಂಕ್ ಲೆಕ್ಕ ಖಾತೆಗಳಿಗೆ ನೇರವಾಗಿ ತಲುಪಬೇಕೆಂಬ ಸದಾಶಯ ಮತ್ತು ಲೋಪದೋಷವಿರುವುದಿಲ್ಲ. ಈ ಆರೋಪದಲ್ಲಿಯೂ ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲ. ಆದ್ದರಿಂದ ತಮ್ಮ ವಿರುದ್ಧದ ಆರೋಪವನ್ನು ಕೈಬಿಡುವಂತೆ ಕೋರಿರುತ್ತಾರೆ.

ಶ್ರೀ ತಿಪ್ಪೇಸ್ವಾಮಿ ಇವರು ಕೆಳಕಂಡಂತೆ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.

1. ಮಧುಗಿರಿ ತಾ.ಪಂ.ಯಲ್ಲಿ ಜೀತ ವಿಮುಕ್ತರ ಪುನರ್ ವಸತಿ ಕಾರ್ಯಕ್ರಮದಡಿ ಮಾಡಲಾದ ವೆಚ್ಚದ ಸಂದರ್ಭದಲ್ಲಿ ತಾವು ವಿಷಯ ನಿರ್ವಾಹಕರಾಗಿ ಅಥವಾ ಸಹಾಯಕ ಲೆಕ್ಕಾಧಿಕಾರಿ ಯಾಗಿಯಾಗಲಿ ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು, ತಾವು ದಿನಾಂಕ: 01-07-2014ರಂದು

ಪ್ರಥಮ ದರ್ಜೆ ಸಹಾಯಕರಾಗಿ ಸದರಿ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದು, ಜೀತ ವಿಮುಕ್ತರ ಪುನರ್ ವಸತಿ ಯೋಜನೆಯ ವಿಷಯ ನಿರ್ವಾಹಕರಾಗಿ ದಿನಾಂಕ:20-08-2014 ರಂದು ಪ್ರಭಾರ ವಹಿಸಿಕೊಂಡಿದ್ದು, ವಿಷಯನಿರ್ವಾಹಕರಾಗಿ ಯಾವುದೇ ಚೆಕ್ ನೀಡಲು ಕಡತ ಮಂಡಿಸಿರುವುದಿಲ್ಲ ಮತ್ತು ವಿತರಿಸಿರುವುದಿಲ್ಲ. ಈ ಅವಧಿಯಲ್ಲಿ ಶ್ರೀ ಲಕ್ಷ್ಮೀಪತಿ ಟಿ.ಎಂಬುವವರು ವಿಷಯ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸಿದ್ದು, ಅವರ ಗೈರು ಹಾಜರಿಯಲ್ಲಿ ಶ್ರೀಮತಿ ಮಹಾಲಕ್ಷ್ಮೀ ಜಿ.ಕೆ. ರವರು ಕೆಲವು ಚೆಕ್‌ಗಳನ್ನು ನೀಡಿರುತ್ತಾರೆ.

2. ರೂ.7200/-ಗಳ ಮಾಸಾಶನ ಚೆಕ್ ಗಳಿಗೆ ಆಗ ಸಹಾಯಕ ಲೆಕ್ಕಾಧಿಕಾರಿಯಾಗಿದ್ದ ಶ್ರೀ ನರಸಿಂಹಮೂರ್ತಿ ಹಾಗೂ ಅವರ ನಂತರ ಪ್ರಭಾರದಲ್ಲಿದ್ದ ಶ್ರೀಮತಿ ಮಹಾಲಕ್ಷ್ಮೀ ಜಿ.ಕೆ. ರವರು ಸಹಿ ಮಾಡಿರುತ್ತಾರೆ. ತಾವು ದಿನಾಂಕ:26-12-2014ರಂದು ಸಹಾಯಕ ಲೆಕ್ಕಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡಿದ್ದು, ಯಾವುದೇ ಜೀತ ವಿಮುಕ್ತರ ಪುನರ್ ವಸತಿ ಚೆಕ್ ಗಳಿಗೆ ಸಹಿ ಹಾಕಿರುವುದಿಲ್ಲವೆಂದು ಈ ಸಂಬಂಧ ಕೆಲವು ದಾಖಲಾತಿಗಳನ್ನು ಲಗತ್ತಿಸಿ, ತಮ್ಮ ಮೇಲಾಧಿಕಾರಿಗಳಿಂದ ಮಾಹಿತಿ ಪಡೆದು ತಮ್ಮ ವಿರುದ್ಧದ ದೋಷಾರೋಪಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

**ಶ್ರೀಮತಿ ಮಹಾಲಕ್ಷ್ಮೀ, ಇವರು ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿ,** ಈ ಹಿಂದೆ ಮಧುಗಿರಿ ತಾಲ್ಲೂಕು ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಟಿ.ಲಕ್ಷ್ಮೀಪತಿ ಪ್ರಥಮ ದರ್ಜೆ ಸಹಾಯಕರು ಎಂಬುವವರು ಸದರಿ ಯೋಜನೆಯ ವಿಷಯ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರು ಸದರಿ ನೋಟೀಸಿಗೆ ಉತ್ತರಿಸಬೇಕಾಗಿದ್ದು ಸದರಿ ಪ್ರಕರಣದಲ್ಲಿ ವಿಷಯ ನಿರ್ವಾಹಕರಾಗಿ ತಾವು ಕರ್ತವ್ಯ ನಿರ್ವಹಿಸಿರುವುದಿಲ್ಲವಾದ್ದರಿಂದ ಈ ಬಗ್ಗೆ ಪರಿಶೀಲಿಸಿ ತಮ್ಮ ಹೆಸರನ್ನು ಕೈಬಿಡುವಂತೆ ಕೋರಿರುತ್ತಾರೆ.

ಆಪಾದಿತರ ವಿರುದ್ಧದ ಆರೋಪಗಳು ಮತ್ತು ಅವರು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಆರೋಪಗಳಿಗೆ ಪ್ರತಿಯಾಗಿ 3 ಜನ ಅಪಾದಿತರು ಸರ್ಕಾರಕ್ಕೆ ಸಲ್ಲಿಸಿರುವ ವಿವರಣೆಯ ಜೊತೆ ಕೆಲವು ದಾಖಲೆಗಳನ್ನು ಪರಿಶೀಲಿಸಲಾಗಿ, ಚೆಕ್ಕುಗಳನ್ನು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿತರಿಸಿರುವ ಬಗ್ಗೆ ಸಂಬಂಧಿಸಿದಂತೆ ದಾಖಲೆ ಹಾಜರುಪಡಿಸಿರುತ್ತಾರೆ. ಆದರೆ ಉಳಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ನಿಯೋಜಿಸಲ್ಪಟ್ಟ ಪರಿಶೀಲನೆ ನಡೆಸಿ ಸಲ್ಲಿಸಿರುವ ವರದಿಯ ಅಂತಿಮ ಭಾಗದಲ್ಲಿ ವ್ಯಕ್ತಪಡಿಸಿರುವ ಅಂಶಗಳು ಮತ್ತು ಲೋಪಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಹೀಗಾಗಿ ಅಪಾದಿತರುಗಳು ತಮ್ಮ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ವಿವರಣೆಯು ಕೇವಲ ಒಂದು ಅಂಶಕ್ಕೆ ಮಾತ್ರ ಸೀಮಿತವಾಗಿದ್ದು, ಉಳಿದ ಅಂಶಗಳಿಗೆ ಸಂಬಂಧಿಸಿದಂತೆ ಯಾವುದೇ ವಿವರಣೆ ಮತ್ತು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಹೀಗಾಗಿ ಆಪಾದಿತರುಗಳು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳಲ್ಲಿ ಪರಿಗಣನಾರ್ಹವಾದ ಅಂಶಗಳು ಕಂಡು ಬರುವುದಿಲ್ಲ.

ಅದ್ದರಿಂದ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ 3 ಜನ ಅಪಾದಿತರುಗಳು ತಮ್ಮ ಕರ್ತವ್ಯನಿರ್ವಹಣೆಯಲ್ಲಿ ಲೋಪವೆಸಗಿರುವುದು ಸ್ಪಷ್ಟವಾಗಿರುವುದರಿಂದ ಸದರಿಯವರುಗಳ ಕರ್ತವ್ಯಲೋಪಕ್ಕೆ ಅನುಗುಣವಾಗಿ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 82 ವಿಸೇಬಿ 2015 ಬೆಂಗಳೂರು ದಿನಾಂಕ:06-11-2015.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಈ ಕೆಳಕಂಡ ಅಧಿಕಾರಿ/ ನೌಕರರುಗಳಾದ:-

1) ಶ್ರೀ ಹೆಚ್.ಡಿ.ಮಹಾಲಿಂಗಯ್ಯ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಧುಗಿರಿ, ತುಮಕೂರು ಜಿಲ್ಲೆ,
2) ಶ್ರೀ ತಿಪ್ಪೇಸ್ವಾಮಿ, ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕು ಪಂಚಾಯತಿ, ಮಧುಗಿರಿ, ತುಮಕೂರು ಜಿಲ್ಲೆ,
3) ಶ್ರೀಮತಿ ಮಹಾಲಕ್ಷ್ಮೀ, ವಿಷಯ ನಿರ್ವಾಹಕರು, ತಾಲ್ಲೂಕು ಪಂಚಾಯತಿ, ಮಧುಗಿರಿ, ತುಮಕೂರು ಜಿಲ್ಲೆ

5../-

ಇವರುಗಳ ವಿರುದ್ಧದ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳ 1957 ರ ನಿಯಮ 8(iv-a) ರನ್ವಯ ಸದರಿಯವರುಗಳ "ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವೇತನ ಬಡ್ತಿಯನ್ನು ಎರಡು ವರ್ಷಗಳ ಅವಧಿಗೆ ಸಂಚಿತ ಪರಿಣಾಮ ಹೊಂದದಂತೆ ಕೆಳಕ್ಕೆ ಇಳಸುವ ದಂಡನೆ"ಯನ್ನು ವಿಧಿಸಿ, ಆದೇಶಿಸಿದೆ.

ಈ ಅವಧಿಯಲ್ಲಿ ಸದರಿಯವರುಗಳು ವಾರ್ಷಿಕ ವೇತನ ಬಡ್ತಿಗೆ ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
3. ನಿರ್ದೇಶಕರು, ಸ್ವ ಉದ್ಯೋಗ ಕಾರ್ಯಕ್ರಮಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
4. ನಿಯಂತ್ರಕರು, ರಾಜ್ಯಲೆಕ್ಕಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು.
5. ಹಿರಿಯ ಉಪನಿರ್ದೇಶಕರು, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಉಪ ನಿರ್ದೇಶಕರು, ಸ್ವ ಉದ್ಯೋಗ ಕಾರ್ಯಕ್ರಮಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ,(ಆಡಳಿತ ಮತ್ತು ಮುಂಗಡ) ಆರ್ಥಿಕ ಇಲಾಖೆ.
6.ಸಂಬಂಧಿಸಿದ ಅಧಿಕಾರಿ/ನೌಕರರುಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು)

ಪ್ರತಿಯನ್ನು ಮಾಹಿತಿಗಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.